ಸೆಲೆಬ್ರಿಟಿ

■ ಹನಿ

# ಯುವ ಶ್ರೀಮಂತ

27ರ ಹರೆಯದಲ್ಲಿ ಇನ್ನೂ ಡಿಗ್ರಿ ಸರ್ಟಿಫಿಕೇಟ್‌ಗಳನ್ನು ಬಗಲಲ್ಲಿ ಇಟ್ಟುಕೊಂಡು ಉದ್ಯೋಗ ಮಾರುಕಟ್ಟೆಯಲ್ಲಿ ಓಡಾಡುವವರೇ ಹೆಚ್ಚು. ಆದರೆ ಮಾರ್ಕ್ ಜೂಕರ್ ಬರ್ಗ್ 27ರ ಹರೆಯದಲ್ಲಿ 'ಜಗತ್ತಿನ ಅತ್ಯಂತ ಶ್ರೀಮಂತ ಯುವಕ' ಎಂಬ ಪಟ್ಟವೇರಿದ್ದಾನೆ. 2011ರಲ್ಲಿ ಈತನ ಒಟ್ಟು ಸಂಪಾದನೆ 17.5 ಶತಕೋಟಿ ಡಾಲರ್. ಹಾಲಿವುಡ್‌ನಲ್ಲಿ ಅತ್ಯದ್ಭುತ ಸಿನಿಮಾಗಳನ್ನು ಮಾಡಿ ಡಾಲರ್‌ಗಳನ್ನು ದೋಚಿದ ಸ್ಟೀವನ್ ಸ್ಪಿಲ್‌ಬರ್ಗ್, 'ಹ್ಯಾರಿ ಪಾಟರ್' ಕೃತಿಯ ಮೂಲಕ ಕೋಟ್ಯಂತರ ಡಾಲರ್ ದುಡಿದ ಜೆ.ಕೆ.ರೋಲಿಂಗ್ ಮುಂತಾದವರನ್ನೂ ಈತ ಶ್ರೀಮಂತಿಕೆಯಲ್ಲಿ ಮಾರುದೂರ ಹಿಂದಿಕ್ಕಿದ್ದಾನೆ. ಜೆಸ್ಸೀ ಈಸನ್‌ಬರ್ಗ್ ಎಂಬ ನಿರ್ದೇಶಕ ಈತನನ್ನೇ ಕೇಂದ್ರವಾಗಿಟ್ಟು 'ದಿ ಸೋಶ್ಯಲ್ ನೆಟ್‌ವರ್ಕ್' ಎಂಬ ಸಿನಿಮಾ ತೆಗೆದದ್ದೂ ವಿವಾದ ಹುಟ್ಟುಹಾಕಿದೆ.



ಸಾಮಾಜಿಕ ಜಾಲತಾಣ 'ಫೇಸ್‌ಬುಕ್' ಹಿಂದಿರುವ ಈತನ ಮುಖವನ್ನು ಬಹಿರಂಗ-ವಾಗಿ ನೋಡಿದವರು ಕಡಿಮೆ. ಆದರೆ ಅಮೆರಿಕ ಮಾತ್ರವಲ್ಲ ವಿಶ್ವದಾದ್ಯಂತ ಈಗ ಈತ ಅತ್ಯಂತ ಪ್ರಭಾವಶಾಲಿ ಇಂಟರ್ ನೆಟ್ ಉದ್ಯಮಿ. ಟ್ಯುನಿಶಿಯಾ, ಈಜಿಪ್ಟ್, ಯೆಮನ್ ಮತ್ತು ಲಿಬಿಯಾಗಳಲ್ಲಿ 'ಫೇಸ್‌ಬುಕ್' ಮೂಲಕವೇ ನಡೆದ ಕ್ರಾಂತಿಯ ಪ್ರಚಾರ ಈತನ ಸ್ಥಾನಮಾನವನ್ನು ಒಮ್ಮಿಂದೊಮ್ಮೆಲೆ ಎತ್ತರಕ್ಕೆ ಒಯ್ದಿದೆ. ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ತಮ್ಮ ಶಾಸನಸಭೆಯಲ್ಲಿ ಈತನನ್ನು ಹಾಡಿ ಹೊಗಳಿದ್ದೇ ಅಲ್ಲದೆ, ಶ್ವೇತಭವನದ ಅಧ್ಯಕ್ಷರ ಔತಣಕ್ಕೂ ವಿಶೇಷ ಆಮಂತ್ರಣ ನೀಡಿದರು. ಆ ಔತಣಕೂಟದಲ್ಲಿ ಮಾರ್ಕ್, ವಿಶ್ವದ ದಿಗ್ಗಜ ಉದ್ಯಮಪತಿಗಳಾದ ಸ್ಟೀವ್ ಜಾಬ್ಸ್, (ಇತ್ತೀಚೆಗೆ ನಿಧನರಾದರು), ಎರಿಕ್ ಸ್ಮಿಟ್ಜ್, ಲ್ಯಾರಿ ಎಲ್ಲಿಸನ್, ಜಾನ್ ಡಾಯರ್ ಮುಂತಾದವರ ಜತೆ ಸರಿಸಮನಾಗಿ ಕುಳಿತು ಊಟ ಮಾಡಿದ್ದು ವಿಶೇಷವೇ.

ಫೇಸ್‌ಬುಕ್ ಮಾದರಿಯ ಜಾಲತಾಣಗಳ ವಿರುದ್ಧ ಸೆನ್ಸಾರ್ ನಿಯಮಗಳನ್ನು ಹೇರಬೇಕೆಂಬ ಚರ್ಚೆ ನಡೆಯುತ್ತಿರುವ ಈ ಹೊತ್ತಿನಲ್ಲಿ, ಮಾರ್ಕ್ ಏನು ಮಾಡುತ್ತಾನೆನ್ನುವ ಕುತೂಹಲ ಹುಟ್ಟಿದೆ. ಹಾರ್ವರ್ಡ್ ಯೂನಿವರ್ಸಿಟಿಯ ಈ ಡ್ರಾಪೌಟ್ ವಿದ್ಯಾರ್ಥಿ (ಬರ್ತ್‌ಡೇ 14/3/84) ಸಹಪಾಠಿಗಳಾದ ಡಸ್ಟಿನ್, ಎಡ್ವರ್ಡೊ ಸವರಿನ್ ಮತ್ತು ಕ್ರಿಸ್ ಹ್ಯೂಸ್ ಜತೆ ಸೇರಿ 2004ರಲ್ಲಿ ಆರಂಭಿಸಿದ ಫೇಸ್‌ಬುಕ್ ಇವತ್ತು ಜಗತ್ತಿನ ಯುವಜನರ ಅಚ್ಚುಮೆಚ್ಚಿನ ತಾಣ. ಸದ್ಯಕ್ಕೆ ಫೇಸ್ ಬುಕ್‌ನ ಶೇಕಡಾ 24ರಷ್ಟು ಷೇರುಗಳು ಮಾರ್ಕ್ ಕೈಯಲ್ಲಿವೆ. ಫೇಸ್‌ಬುಕ್ ಪ್ರಬಲವಾಗಿ ಬೆಳೆದಷ್ಟೂ ಮಾರ್ಕ್ ಪ್ರಾಬಲ್ಯ ಹೆಚ್ಚುತ್ತಲೇ ಹೋಗುತ್ತದೆ.



# ಭಾರತದಲ್ಲಿ ಓಪ್ರಾ

ಇಂಗ್ಲೆಂಡಿನ ಮಹಾರಾಣಿ ಭಾರತಕ್ಕೆ ಬಂದಾಗಲೂ ಇಷ್ಟೊಂದು ಸಂಭ್ರಮ ಎದ್ದಿರಲಿಲ್ಲ. 'ಟಾಕ್ ಷೋಗಳ ರಾಣಿ' ಎಂದೇ ಖ್ಯಾತಿ ಹೊಂದಿರುವ ಓಪ್ರಾ ವಿನ್‌ಫ್ರೇ ಭಾರತ ಭೇಟಿ ಅಷ್ಟೊಂದು ಸುದ್ದಿ ಮಾಡಿದೆ. ಈ ಭೇಟಿ ಮೂರೇ ದಿನದ್ದಾದರೂ 30 ದಿನಗಳಿಗೆ ಆಗುವಷ್ಟು ಸುದ್ದಿಗಳನ್ನು ನೀಡಿ 'ರಾಣಿ' ಮರಳಿದ್ದಾಳೆ. ಮುಂಬೈಯಲ್ಲಿ ಸ್ವತಃ ಅಮಿತಾಭ್ ಬಚ್ಚನ್ ಕಾರ್ ಡ್ರೈವ್ ಮಾಡಿಕೊಂಡು ಓಪ್ರಾಳನ್ನು ನಾಷ್ಟಕ್ಕೆ ಕರೆದೊಯ್ದಿದ್ದಾನೆ. ಆತನಿಗೆ ಐಶ್ವರ್ಯ ರೈ ಮತ್ತು ಅಭಿಷೇಕ್ ಸಾಥ್ ನೀಡಿದ್ದಾರೆ. ಮುಂಬೈಯಲ್ಲಿ ಗಾದ್ರೆಜ್ ಕಂಪೆನಿಯ ಪರಮೇಶ್ವರ್ ಗಾದ್ರೆಜ್ ನೀಡಿದ ಔತಣಕೂಟದಲ್ಲಿ ಖ್ಯಾತನಾಮರ ದಂಡೇ ಈಕೆಯ ಜತೆಗೆ ಊಟ ಮಾಡಲು ಮುಗಿಬಿದ್ದಿತ್ತು. ಅನಿಲ್ ಕಪೂರ್, ಶಶಿ–ಸುನಂದಾ ತರೂರ್, ಹೃತಿಕ್ ರೋಶನ್, ಎ.ಆರ್.ರೆಹಮಾನ್, ಮುಖೇಶ್– ಅನಿಲ್ ಅಂಬಾನಿ, ಸಿದ್ದಾರ್ಥ ಮಲ್ಯ– ಹೀಗೆ ಓಪ್ರಾ ಭೋಜನಕೂಟಕ್ಕೆ ರಂಗೇರಿತ್ತು.

ತಾಜ್‌ಮಹಲ್ ಮುಂದೆ ಶೂಟಿಂಗ್ ಮಾಡುತ್ತಿದ್ದ ಓಪ್ರಾರನ್ನು ಶೂಟ್ ಮಾಡಲು ಮುಗಿಬಿದ್ದ ಫೋಟೋಗ್ರಾಫರ್‌ಗಳು ಮತ್ತು ಪತ್ರಕರ್ತರನ್ನು ಆಕೆಯ ಅಂಗರಕ್ಷಕರು ತಳ್ಳಿದ್ದೂ ದೊಡ್ಡ ರಂಪಾಟಕ್ಕೆ ಕಾರಣವಾಯಿತು. ಮಥುರಾದಲ್ಲಿ ಅನಿರೀಕ್ಷಿತವಾಗಿ ವಿಧವೆಯರ ಆಶ್ರಮಕ್ಕೆ ಭೇಟಿ ನೀಡಿದಾಗಲೂ ಪತ್ರಕರ್ತರ ಮತ್ತು ಭದ್ರತೆಯವರ ಮಧ್ಯೆ ತಿಕ್ಕಾಟ ನಡೆಯಿತು. ಜೈಪುರದ ಭಾರತೀಯ ಸಾಹಿತ್ಯ ಉತ್ಸವದಲ್ಲಂತೂ ಓಪ್ರಾ ಸೂಪರ್‌ಸ್ಟಾರ್! ಸಲ್ಮಾನ್ ರಶ್ದಿ ಆರಂಭೋತ್ಸವಕ್ಕೆ ಬರದೇ ಇದ್ದದ್ದೂ ಓಪ್ರಾರ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿತು!

ಬಡತನದಲ್ಲಿ ಹುಟ್ಟಿ ಇವತ್ತು ವಿಶ್ವದ ಅತ್ಯಂತ ಪ್ರಭಾವಶಾಲಿ ಮಹಿಳೆಯಾಗಿರುವ ಓಪ್ರಾ (ಬರ್ತ್‌ಡೇ 29/1/54) ಈಗ 2.7 ಶತಕೋಟಿ ಡಾಲರ್ ಒಡತಿ. 25 ವರ್ಷಗಳ ಕಾಲ ಆಕೆ ನಡೆಸಿದ ಟೀವಿ ಟಾಕ್ ಷೋ ಆರಂಭದಲ್ಲಿ ಗಣ್ಯರ ತಪ್ಪೊಪ್ಪಿಗೆಯ ಭಾವುಕ ವೇದಿಕೆಯಾಗಿ ಸುದ್ದಿ ಮಾಡಿದರೂ ಆ ಬಳಿಕ ಸಾಹಿತ್ಯ, ವ್ಯಕ್ತಿತ್ವ ವಿಕಸನ, ಆಧ್ಯಾತ್ಮ ಮುಂತಾಗಿ ಬೇರೆಲ್ಲ ವಿಷಯಗಳೂ ಬಂದವು. ರೇಡಿಯೊ, ಪತ್ರಿಕೆ, ಆನ್‌ಲೈನ್ ಮ್ಯಾಗಸಿನ್– ಹೀಗೆ ಕೈ ಇಟ್ಟಲ್ಲೆಲ್ಲಾ ಚಿನ್ನದ ಗಣಿ ತೋಡಿದ ಓಪ್ರಾ, ಅಮೆರಿಕದಲ್ಲಿ ಆಫ್ರಿಕನ್ ಮೂಲದ ಜನರಿಗೆ ಸ್ವಾಭಿಮಾನದ ಕೇಂದ್ರವಾದವಳು. ಬರಾಕ್ ಒಬಾಮಾ ಅಮೆರಿಕದ ಅಧ್ಯಕ್ಷ ಹುದ್ದೆ ಗೆಲ್ಲುವಲ್ಲೂ ಓಪ್ರಾ ಕೈವಾಡ ಇತ್ತು ಎಂದರೆ ಈಕೆಯ ಪ್ರಭಾವದ ಬಗ್ಗೆ ಅಂದಾಜು ಮಾಡಬಹುದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65